ಮುಂದುವರಿದ ಪಾಟೀಸವಾಲು ಅರ್ಜಿದಾರರ ಪರ ವಕೀಲರಾದ ಶ್ರೀ.ಕೆ..ಪಿ ರವರಿಂದ

6. ಪ್ರಸ್ತುತ ನಿಮ್ಮ ಆದಾಯದ ಮೂಲ ಏನು ಎಂದರೆ ಸಾಕ್ಷಿ ಆದಾಯ ಏನು ಇಲ್ಲ ಎಂದು ಹೇಳುತ್ತಾರೆ. ಈಗ ಹೇಗೆ ಬದುಕುತ್ತಿದ್ದಿರ ಎಂದರೆ ಸಾಕ್ಷಿ ಮಗಳು ಅಳಿಯ ಕೊಡುತ್ತಿದ್ದಾರೆ ಎಂದು ಹೇಳುತ್ತಾರೆ. ನಾನುಯಾವ ಕೂಲಿ ಕೆಲಸಕ್ಕೆ ಹೋಗುವುದಿಲ್ಲ. ಮಗಳು ಅಳಿಯ ತಿಂಗಳಿಗೆ ಎಷ್ಟು ಖರ್ಚು ಕೊಡುತ್ತಾರೆ ಎಂದರೆ ಸಾಕ್ಷಿ 500 ರಿಂದ 1000 ದೊಳಗೆ ಕೊಡುತ್ತಾರೆ ಎಂದು ಹೇಳುತ್ತಾರೆ . ರೂ. 500 ರಿಂದ 1000 ದೊಳಗೆ ಯಾವುದೇಲ್ಲ ಖರ್ಚು ಬರುತ್ತದೆಎಂದರೆ ಸಾಕ್ಷಿ ಊಟದ ಖರ್ಚು ಮಾತ್ರ ಬರುತ್ತದೆ. ಬಟ್ಟೆ ಬರೆ ಬೇಕು ಎಂದರೆ ಅಳಿಯ ತೆಗೆದುಕೊಡುತ್ತಾರೆ. ಉಷಾರಿಲ್ಲ ಎಂದು ದಾಖಲೆಗಳನ್ನು ಹಾಜರುಪಡಿಸಿದ್ದು ಅದಕ್ಕೆ ಈಗ ಮಾತ್ರೆಗಳನ್ನು ತೆಗೆದುಕೊಳ್ಳುತ್ತೀರ ಎಂದರೆ ಹೌದು. ಆ ಹಣವನ್ನು ಯಾರು ಕೊಡುತ್ತಾರೆಎಂದರೆ ಸಾಕ್ಷಿ ಕಾಂಟ್ರಾಕ್ಟರ್ ನವೀನ ಕೊಡುತ್ತಾರೆ ಎಂದು ಹೇಳುತ್ತಾರೆ. ಅವರು ನಿಮ್ಮ ಊರಿನವರ ಎಂದರೆ ಹೌದು. ಈಗ ನಾನು ಬಸ್ಸಿನಲ್ಲಿ ಓಡಾಡುತ್ತೇನೆ. ಅಂದಾಜು ತಿಂಗಳಿಗೆ ಎಷ್ಟು  ಪ್ರಯಾಣ ಮಾಡುತ್ತಿರ ಎಂದರೆ ಸಾಕ್ಷಿ ಎಲ್ಲೂ ಹೋಗುವುದಿಲ್ಲ ಕೋರ್ಟಿಗೆ ಮಾತ್ರ ಬರುತ್ತೇನೆ. ನಿಮ್ಮ ಊರಿನಿಂದ ನ್ಯಾಯಾಲಯಕ್ಕೆ ಬರಲು ಎಷ್ಟು ಖರ್ಚಾಗುತ್ತದೆ ಎಂದರೆ ಸಾಕ್ಷಿ ಹೋಗಲು ಬರಲು ರೂ. 200 ಖರ್ಚಾಗುತ್ತದೆ ಎಂದು ಹೇಳುತ್ತಾರೆ . ಆ ಖರ್ಚನ್ನು ಯಾರು ಕೊಡುತ್ತಾರೆ ಎಂದರೆ ಸಾಕ್ಷಿ ರೂ. 500 ಅಥವಾ 1000 ದಂತೆ ಸಾಲವನ್ನು ಪಡೆದುಕೊಂಡು ಬರುತ್ತೇನೆ. ನಿಮ್ಮಲ್ಲಿ ಕೈ ಸಾಲ ಈಗ ಎಷ್ಟಿದೆ ಎಂದರೆ ಇಲ್ಲ.

7. ಬ್ಯಾಂಕಿನಲ್ಲಿ ನಿಮ್ಮ ಹೆಸರಿನಲ್ಲಿ ಎಷ್ಟು ಠೇವಣಿ ಇದೆ ಎಂದರೆ ಇಲ್ಲ. ನಿಮ್ಮ ಗಂಡು ಮಕ್ಕಳು ತೀರಿದಾಗ ಬಂದ ವಿಮಾ ಪರಿಹಾರ ಹಣ ಇಲ್ಲಿ ಇತ್ತು ಎಂದರೆ ಅರ್ಜಿದಾರರ ಹತ್ತಿರ ಇತ್ತು, ಆಗ ನಿಮ್ಮ ಹತ್ತಿರ ಎಷ್ಟು ಇತ್ತು ಎಂದರೆ 1 ಲಕ್ಷ ಇತ್ತು ಅದು ಖರ್ಚಾಗಿರುತ್ತದೆ . ಆ ಹಣವನ್ನು ಮದುವೆಯ ಸಮಯದಲ್ಲಿ ಮತ್ತು ಮಕ್ಕಳಿಗೆ ಉಷಾರಿಲ್ಲದ ಸಮಯದಲ್ಲಿ ಖರ್ಚು ಮಾಡಿದ್ದೇನೆ.

8. ಮಾನ್ಯ ಮೂಡಿಗೆರೆ ನ್ಯಾಯಾಲಯದಲ್ಲಿ ಅರ್ಜಿದಾರರ ವಿರುದ್ಧ ಅರ್ಜಿದಾರರು ಮನೆಗೆ ಬರಬೇಕೆಂದು ಅರ್ಜಿಯನ್ನು ದಾಖಲಿಸಿದ್ದೆ. ಪ್ರಸ್ತುತ ಪ್ರಕರಣ ದಾಖಲಾದ ನಂತರ ನೋಟೀಸ್ ಬಂದಿದ್ದು, ಆದು ಆದ ನಂತರ ನಾನು ಮೂಡಿಗೆರೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಮೂಡಿಗೆರೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಅರ್ಜಿದಾರರಿಗೆ ವಕೀಲರ

ಮೂಲಕ ನೋಟೀಸ್ ನೀಡಿರುತ್ತೇನೆ. ಅರ್ಜಿದಾರರು ಸದರಿ ಅರ್ಜಿಯನ್ನು ಬೆಳ್ತಂಗಡಿ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಬೇಕೆಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಹೌದು. ಮೂಡಿಗೆರೆ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣ, ವಕೀಲರು ನೋಟೀಸ್ ನೀಡಿಲು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಾಜರಾಗಲು ವಕೀಲರಿಗೆ ಹಣ ಕೊಟ್ಟಿದ್ದಿರ ಎಂದರೆ ಹೌದು. ಆ ಎಲ್ಲಾ ಖರ್ಚುಗಳನ್ನು ನನ್ನ ದೊಡ್ಡ ಮಗಳ ಗಂಡ ಅಳಿಯ ಬರಿಸಿರುತ್ತಾರೆ. ನನ್ನ ದೊಡ್ಡ ಮಗಳು ಮತ್ತು ಅಳಿಯ ಬೆಳ್ತಂಗಡಿಯಲ್ಲಿ ಬೇರೆ ವಾಸವಾಗಿದ್ದಾರೆ. ದಿನನಿತ್ಯದ ಖರ್ಚುಗಳನ್ನು ಯಾರು ಬರಿಸುತ್ತಾರೆ ಎಂದರೆ ಸಾಕ್ಷಿ ನನ್ನ ಅಳಿಯ ತಿಂಗಳಿಗೆ ಯಾವಾಗಲಾದರೂ ಒಮ್ಮೆ ಬಂದು ಕೊಡುತ್ತಾರೆ.

9. ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರಿಗೆ ತಿಂಗಳಿಗೆ ಹಣಕೊಡಬೇಕೆಂದು ಮಧ್ಯಂತರ ಆದೇಶವಾಗಿರುವ ವಿಚಾರ ನನಗೆ ಗೊತ್ತು. ಮದುವೆಯಾದ ನಂತರ ಅರ್ಜಿದಾರರು ನಿಮ್ಮ ಜೊತೆಯಿದ್ದಾಗ ದಿನ ನಿತ್ಯದ ಖರ್ಚುಗಳನ್ನು ಯಾರು ಕೊಡುತ್ತಿದ್ದರು ಎಂದರೆ ನಾನೇ ಕೊಡುತ್ತಿದ್ದೆ. ಆಗ ಅರ್ಜಿದಾರರ ಖರ್ಚಿಗೆ ಎಷ್ಟು ಹಣವನ್ನು ಕೊಡುತ್ತಿದ್ದಿರ ಎಂದರೆ ಸಾಕ್ಷಿ ನಿಗದಿ ಇಲ್ಲ ಮನೆಗೆ ಸಮಾನನ್ನು ತಂದು ಕೊಡುತ್ತಿದ್ದೆ. ಅರ್ಜಿದಾರರ ಬಟ್ಟೆ ಚಪ್ಪಲಿ ಯಾರು ಹಣವನ್ನು ಕೊಡುತ್ತಿದ್ದರು ಎಂದರೆ ನಾನೇ ಕೊಡುತ್ತಿದ್ದೆ . ಎಷ್ಟು ಹಣವನ್ನು ಕೊಡುತ್ತಿದ್ದಿರ ಎಂದರೆ ಸಾಕ್ಷಿ ಇಷ್ಟು ಏನು ಇಲ್ಲ. ಒಳ್ಳೆ ಒಳ್ಳೆ ಸೀರೆಯನ್ನು, ಚಪ್ಪಲಿಯನ್ನು ಕೊಡಿಸುತ್ತಿದ್ದಿರ ಎಂದರೆ ಸಾಕ್ಷಿ ಅವರು ಇಷ್ಟ ಪಟ್ಟಿದ್ದನ್ನು ಕೊಡಿಸುತ್ತಿದ್ದೆ. ಸಂಸಾರದ ಮತ್ತು ಮಕ್ಕಳ ವೆಚ್ಚವನ್ನು ನಾನೇ ನೋಡಿಕೊಳ್ಳುತ್ತಿದ್ದೆ. ಆಗ ನಾನು ದಿನಕ್ಕೆ ರೂ. 300 ರಿಂದ 400 ಸಂಪಾದನೆ ಮಾಡುತ್ತಿದ್ದೆ. ಒಟ್ಟಿಗೆ ಇರುವಾಗ ಕೃಷಿ ಭೂಮಿಯ ಮೇಲ್ವಿಚಾರಣೆಯನ್ನು ಯಾರು ಮಾಡುತ್ತಿದ್ದರು ಎಂದರೆ ಸಾಕ್ಷಿ ನಮಗೆ ಬಿಟ್ಟದ್ದನ್ನು ಮೂರು ಜನ ಒಟ್ಟಿಗೆ ಸೇರಿ ಮಾಡುತ್ತಿದ್ದೇವು ಎಂದು ಹೇಳುತ್ತಾರೆ. ನಮ್ಮ ಮನೆಯಲ್ಲಿ ನನ್ನ ಸಂಸಾರ ಹಾಗೂ ನನ್ನ ತಾಯಿ ಮತ್ತು ತಮ್ಮ ಬೇರೆ ಇದ್ದರು ನನ್ನ ಸಂಸಾರವನ್ನು ನಾನೇ ನೋಡಿಕೊಳ್ಳುತ್ತಿದ್ದೆ. ಆ ಸಮಯದಲ್ಲಿ ತಾಯಿಗೆ ಏನಾದರೂ ಕೊಡುತ್ತಿದ್ದಿರ ಎಂದರೆ ಹೌದು ಅವರಿಗೆ 1 ಪಲ್ಲ ಭತ್ತವನ್ನು ಕೊಡುತ್ತಿದ್ದೆ. ಒಟ್ಟಿಗೆ ಇರುವಾಗ ಏನೆಲ್ಲಾ ಕೃಷಿ ಮಾಡುತ್ತಿದ್ದಿರ ಎಂದರೆ ಸಾಕ್ಷಿ ಭತ್ತವನ್ನು ಬೆಳೆಯುತ್ತಿದ್ದೇವು ಎಂದು ಹೇಳುತ್ತಾರೆ. ಅದು ನಿಮ್ಮ ಖರ್ಚಿಗೆ ಸಕಾಗುತ್ತಿತ್ತ ಎಂದರೆ ಇಲ್ಲ . ಆಗ ನಾನು ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ.

RW-1

10. ನನ್ನ ಚಿಕ್ಕಮಗಳು ಶಾಂತಿ ಅರ್ಜಿದಾರರ ಜೊತೆ ವಾಸವಿದ್ದಾರೆ. ಅವರು ನಿಮ್ಮ ಮನೆಯನ್ನು ಬಿಟ್ಟು ಬರಲು ಕಾರಣವೇನೆಂದರೆ ಸಾಕ್ಷಿ ಮದುವೆ ಮಾಡಿಕೊಟ್ಟಿದ್ದೇವೆ ಎಂದು ಹೇಳುತ್ತಾರೆ . ಅವರಿಗೆ ಯಾವ ವರ್ಷ ಮದುವೆ ಮಾಡಿಕೊಟ್ಟಿದ್ದಿರ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಆದರೆ 13 ಅಥವಾ 14 ವರ್ಷ ಆಗಿರಬೇಕು ಎಂದು ಹೇಳುತ್ತಾರೆ. ನನ್ನ ಎರಡೆ ಮಗಳಿಗೆ ಇಬ್ಬರು ಗಂಡ ಮಕ್ಕಳು. ಸುಶಾಂತ್ ನಮ್ಮ ಮನೆಯಲ್ಲಿ 3 ವರ್ಷಗಳ ಕಾಲ ವಿದ್ಯಾಭ್ಯಾಸಕ್ಕೆ ಇದ್ದ. ಎಲ್ಲರು ಇಲ್ಲಿಗೆ ಬಂದ ಕಾರಣ 2021 ರಲ್ಲಿ ಆತನು ಬಂದಿರುತ್ತಾನೆ . ಅರ್ಜಿದಾರರು ಮನೆ ಬಿಟ್ಟುಬಂದಾಗ ನೀವು ಪೊಲೀಸ್ ದೂರ ಕೊಟ್ಟಿದ್ದು, ಏನು ದೂರುಕೊಟ್ಟಿದ್ದಿರ ಎಂದರೆ ಸಾಕ್ಷಿ ಅವರನ್ನು ವಿಚಾರಣೆ ಮಾಡಿ ಕಳುಹಿಸಿಕೊಡಿ ಎಂದು ನೀಡಿದ್ದೇನೆ. ಆಗ ಅರ್ಜಿದಾರರು ಮಗಳನ್ನು ಕೇಳಿ 15 ದಿನ ಬಿಟ್ಟು ಬರುತ್ತೇನೆ ಎಂದು ಹೇಳಿದ್ದರು, ಬರಲಿಲ್ಲ. ನನ್ನ ಮೇಲೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ. ಒಂದು ಸಿವಿಲ್ ದಾವೆ ಬಾಕಿ ಇರುತ್ತದೆ. ಆ ಸಮಯದಲ್ಲಿ ನನ್ನ ಮೇಲೆ ಗಲಾಟೆಯ ವಿಚಾರವಾಗಿ ಕಿಮಿನಲ್ ಪ್ರಕರಣ ದಾಖಲಾಗಿತ್ತು. ಆದು 10 ವರ್ಷಗಳ ಹಿಂದೆಯೇ ಮುಕ್ತಾಯವಾಗಿರುತ್ತದೆ . ನನ್ನ ಮೇಲೆ ಯಾವುದೇ ರೌಡಿ ಸೀಟ್ ಕೇಸ್ ದಾಖಲಾಗಿರುವುದಿಲ್ಲ . ನಾನು ಕ್ರಿಮಿನಲ್ ಹಿನ್ನೆಲೆ ಉಳ್ಳವನು ನನ್ನ ಮೇಲೆ ಒಂದು ರೌಡಿ ಸೀಟರ್ ಕೇಸ್ ದಾಖಲಾಗಿತ್ತು ಎಂದು ಅನುಭವ ಕೊಡುತ್ತಾರೆ ಎಂದರೆ ಸರಿಯಲ್ಲ.

11. ಪಾಟೀ ಸವಾಲಿನಲ್ಲಿ ಕಳಸ ತಾಲೂಕಿನ ಹೆಮ್ಮಕ್ಕಿ ಗ್ರಾಮದಲ್ಲಿ 1.20 ಎಕ್ರೆ ಜಾಗ ಅರ್ಜಿದಾರರ ಹೆಸರಿನಲ್ಲಿ ಇದೆಎಂದು ತಿಳಿಸಿದ್ದು, ಈಗ ಅದು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಅರ್ಜಿದಾರರ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. ಅದರ ಸರ್ವೆ ನಂಬರ್ 119 ಆಗಿರುತ್ತದೆ. ಸಾಕ್ಷಿಗೆ ಒಂದು ಪಹಣಿ ಪತ್ರಿಕೆ ನೀಡಿ ಅದರ ಸರ್ವೆ ನಂಬರ್ ಎಷ್ಟು ಎಂದು ಕೇಳಲಾಗಿ ಸಾಕ್ಷಿ ಸದರಿ ಪಹಣಿ ಪತ್ರಿಕೆಯನ್ನು ನೋಡಿ 119ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ನಿಪಿ–ಆರ್ –12 ನ್ನು ತೋರಿಸಲಾಗಿ ಅದರ ಸರ್ವೆ ನಂಬರ್ 119 ಎಂದು ತಿಳಿಸಿರುತ್ತಾರೆ. ಅದು ಅರ್ಜಿದಾರರ ಹೆಸರಿನಲ್ಲಿ 1.20 ಎಕ್ರೆ ಜಮೀನು ಇರುತ್ತದೆ. ಸಾಕ್ಷಿಗೆ ನಿಪಿ–ಆರ್–12 ನ್ನು ತೋರಿಸಿ ಅದರ ದಿನಾಂಕವನ್ನು ಕೇಳಲಾಗಿ 31.08.2024 ಎಂದು ಹೇಳುತ್ತಾರೆ. ಸಾಕ್ಷಿಗೆ ಸರ್ವೆ ನಂಬರ್ 119 ರ ಆರ್.ಟಿ.ಸಿ ತೋರಿಸಿ ಅದರ ದಿನಾಂಕವನ್ನು ಕೇಳಲಾಗಿ ಸಾಕ್ಷಿ 6.1.2025 ಎಂದು ಉತ್ತರಿಸಿರುತ್ತಾರೆ. ಅದರ ಪುಟ ಸಂಖ್ಯೆ ಎಷ್ಟು ಎಂದರೆ ಸಾಕ್ಷಿ 1/3 ಎಂದು ಹೇಳುತ್ತಾರೆ . ಸದರಿ ಪಹಣಿ ಪತ್ರಿಕೆ ಕಾಲಂ 9 ರಲ್ಲಿ ಎಷ್ಟು ವಿಸ್ತೀರ್ಣ ಇದೆ

ಎಂದರೆ ಸಾಕ್ಷಿ 184.22 ಇದೆ ಎಂದು ಹೇಳುತ್ತಾರೆ. ಅದೇ ಸರ್ವೆ ನಂಬರ್ ಪುಟ ಸಂಖ್ಯೆ –2 ರಲ್ಲಿ ಕಾಲಂ–9 ಖಾಲಿ ಇದೆ. ಅದೇ ಸರ್ವೆ ನಂಬರ್ ಪಹಣಿ ಪತ್ರಿಕೆ ಪುಟ ಸಂಖ್ಯೆ 3 ರಲ್ಲಿ 1.20 ಎಕ್ರೆ ಜಾಗ ಇರುತ್ತದೆ.ಅದು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಸರ್ಕಾರ ಗೋಮಾಳ ಎಂದು ಬರೆದಿದ್ದಾರೆ ಎಂದು ಹೇಳುತ್ತಾರೆ. 1.20 ಎಕ್ರೆ ಅರ್ಜಿದಾರರ ಹೆಸರಿಗೆ ಅಕ್ರಮ ಸಕ್ರಮದಲ್ಲಿ ಆಗಿದೆ ಎಂದು ತಿಳಿಸಿದ್ದು ಈಗ ಅದೇ ಸರ್ವೆ ನಬಂರ್ ಸರ್ಕಾರಿ ಗೋಮಾಳವಾಗಿದೆ ಎಂದರೆ ನನಗೆ ಗೊತ್ತಿಲ್ಲ.

12. ನನಗೆ ಚಿಕ್ಕಮಗಳೂರು ಎ.ಸಿ ನ್ಯಾಯಾಲಯದಿಂದ ಯಾವುದೇ ನೋಟೀಸ್ ಬಂದಿರುವುದಿಲ್ಲ. ಸರ್ವೆ ನಂಬರಿ 119 ಅಜೂ ಬಾಜೂ ದಾರರ ಹೆಸರು ಗೊತ್ತ ಎಂದರೆ ಇಲ್ಲ. ಅಲ್ಲಿ ಯಾರಿಗೆಲ್ಲ ಅಕ್ರಮ ಸಕ್ರಮದಲ್ಲಿ ಮಂಜೂರಾಗಿದೆ ಎಂದರೆ ಸಾಕ್ಷಿ ಎಲ್ಲರಿಗೂ ಆಗಿದೆ ಆದರೆ ಯಾರಿಗೆ ಆಗಿದೆ ಎಂಬುದು ಗೊತ್ತಿಲ್ಲ. ಅಜೂ ಬಾಜೂದಾರರ ಒಬ್ಬರ ಹೆಸರು ಗೊತ್ತ ಎಂದರೆ ಇಲ್ಲ. ನಮಗೂ ಅವರಿಗೂ 1 ಕಿ.ಮೀ ದೂರ ಇದೆ. ಅರ್ಜಿದಾರರ ಹೆಸರಿಗೆ ಮಂಜೂರಾದ 1.20 ಎಕ್ರೆ ಜಾಗ ನಿಮ್ಮ ಮನೆಯಿಂದ ಎಷ್ಟು ದೂರ ಇದೆ ಎಂದರೆ ಸಾಕ್ಷಿ 2 ರಿಂದ 3 ಕಿ.ಮಿ ದೂರ ಇದೆ ಎಂದು ಹೇಳುತ್ತಾರೆ. 2 ಕಿ.ಮೀ ದೂರದಲ್ಲಿ ಇರುವ ಜಾಗದಲ್ಲಿ ಅರ್ಜಿದಾರರು ಅಡಿಕೆ ಕುಯ್ದುಕೊಂಡು ಹೋಗುವುದನ್ನು ನೋಡಿದ್ದಿರ ಎಂದರೆ ಹೌದು. ಸುಮಾರು 3 ತಿಂಗಳ ನಂತರ ಅರ್ಜಿದಾರರು ಆ ಜಾಗಕ್ಕೆ ಬಂದಿರುವುದನ್ನು ನೀವು ನೋಡಿದ್ದಿರ ಎಂದರೆ ಇಲ್ಲ. ಈಗ ಪ್ರಸ್ತುತ ಆ ಜಾಗದಲ್ಲಿ ಏನು ಕೃಷಿ ಇದೆ ಎಂದರೆ ನನಗೆ ಗೊತ್ತಿಲ್ಲ ನಾನು ನೋಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯನ್ನು ಅರ್ಜಿದಾರರ ವಿರುದ್ಧ ಮಾಡಿದ್ದಾರೆ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿದ ಮೇರೆಗೆ ಸದರಿ ದಾಖಲೆಯನ್ನು ನಿಪಿ–1 ಎಂದು ಗುರುತಿಸಲಾಯಿತು. ಅರ್ಜಿದಾರರಿಗೆ ತಿಳಿಯದಾಗೆ ಮೋಸದಿಂದ ಅರ್ಜಿದಾರರ ಹೆಸರಿನಲ್ಲಿ ಅಕ್ರಮ ಸಕ್ರಮ ಅರ್ಜಿ ಸಲ್ಲಿಸಿ ಮಂಜೂರು ಮಾಡಿಸಿದ್ದೇನೆ ಎಂದರೆ ಸಾಕ್ಷಿ ನನಗೆ ಅದರ ವಿಚಾರ ಗೊತ್ತಿಲ್ಲ ಆದರೆ ಅವರ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ . ಈಗ ಅರ್ಜಿದಾರರ ಹೆಸರಿನಿಂದ ಆ ಜಾಗ ಕಳಚಿ ಸರ್ಕಾರಿ ಗೋಮಾಳ ಎಂದು ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಅದರ ಒಟ್ಟಿಗೆ ತುಂಬ ಜನಕ್ಕೆ ಆ ಜಾಗ ಮಂಜೂರಾಗಿದ್ದು ಅದನ್ನು ಎ.ಸಿ ರವರು ಸರ್ಕಾರಿ ಗೋಮಾಳ ಎಂದು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ಆ ವಿಚಾರ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. 2021 ರಲ್ಲಿ ಸುಶಾಂತ್ ನಮ್ಮ ಮನೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ನಾನು ಅರ್ಜಿದಾರರಿಗೆ ಹಲ್ಲೆ ಮಾಡಿದ್ದೇನೆ ಎಂದರೆ ಸರಿಯಲ್ಲ . ಆ ಸಮಯದಲ್ಲಿ ನನ್ನ ಮಗಳು ಹಾಗು ಅವಳ ಮಗ ಸುಶಾಂತ್ ಮನೆ ಬಿಟ್ಟು ಬಂದಿದ್ದಾರೆ, ಅರ್ಜಿದಾರರು ಸಹ ನನ್ನ ಕಿರುಕುಳ ತಾಳಲಾರದೆ ಮನೆಯನ್ನು ಬಿಟ್ಟು ಬಂದಿದ್ದಾರೆ ಎಂದರೆ ಸುಳ್ಳು. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ-ಆರ್-9 ರಿಂದ 11 ದಾಖಲೆಗಳ ಬಗ್ಗೆ ಅರ್ಜಿದಾರರಿಗೆ ಯಾವುದೇ ವಿಚಾರ ಗೊತ್ತಿರಲಿಲ್ಲ ಬ್ಯಾಂಕಿನ ವ್ಯವಹಾರವನ್ನು ನಾನೇ ಮಾಡುತ್ತಿದ್ದೆ ಎಂದರೆ ಸರಿಯಲ್ಲ ಅರ್ಜಿದಾರರಿಗೆ ಆ ವಿಚಾರ ಗೊತ್ತಿತ್ತು ನಾನೇ ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದೆ. ಅರ್ಜಿದಾರರಿಗೆ ಯಾವುದೇ ಹಣವನ್ನು ಕೊಡದೆ ನಾನೇ ಉಪಯೋಗಿಸುತ್ತಿದ್ದೇನೆ ಎಂದರೆ ಸುಳ್ಳು. ನನ್ನ ವಶದಲ್ಲಿದ್ದ ಪಾಸ್ ಬುಕ್ ಮತ್ತು ಬಾಂಡ್ ನ್ನು ಹಾಜರುಪಡಿಸಿದ್ದೇನೆ ಎಂದರೆ ಹೌದು ಅಲ್ಲಿ ಬಿಟ್ಟು ಬಂದಿದ್ದರು ಅದನ್ನು ನಾನು ಹಾಜರುಪಡಿಸಿರುತ್ತೇನೆ. ಅರ್ಜಿದಾರರ ಹೆಸರಿನಲಿದ್ದ ಠೇವಣಿಯನ್ನು ನಾನೇ ಡ್ರಾ ಮಾಡಿ ಉಪಯೋಗಿಸಿದ್ದೇನೆ ಎಂದರೆ ಸುಳ್ಳು. ವೆಯಕ್ತಿಕವಾಗಿ ವರ್ಷಕ್ಕೆ ರೂ. 5 ಲಕ್ಷ ಕೃಷಿಯಲ್ಲಿ ವರ್ಷಕ್ಕೆ ರೂ. 10 ಲಕ್ಷ ಆದಾಯ ಬರುತ್ತದೆ ಎಂದು ನನಗೆ ಅನುಭವ ಕೊಡುತ್ತಾರೆ ಎಂದರೆ ಸುಳ್ಳು. ಮದುವೆಯಾದ ಕಾಲದಿಂದಲೂ ಅರ್ಜಿದಾರರನ್ನು ಸರಿಯಾಗಿ ನೋಡಿಕೊಂಡಿರುವುಲದಿಲ್ಲ . ಅಲ್ಲದೆ ಮಕ್ಕಳನ್ನು ಸಹ ಸರಿಯಾಗಿ ನೋಡಿಕೊಂಡಿಲ್ಲ ಎಂದು ನನಗೆ ಅನುಭವ ಕೊಡುತ್ತಾರೆ ಎಂದರೆ ಸುಳ್ಳು . ಪ್ರಕಾಶ ಮತ್ತು ನನ್ನ ತಾಯಿ ಯಾವುದೇ ಅದಾಯವನ್ನು ಪಡೆದುಕೊಳ್ಳುತ್ತಿರಲಿಲ್ಲ ಎಲ್ಲ ಅದಾಯವನ್ನು ನಾನೇ ಪಡೆದುಕೊಳ್ಳುತ್ತಿದ್ದೆ ಎಂದರೆ ಸುಳ್ಳು . ಅರ್ಜಿದಾರರಿಗೆ ಸೇರಿದ 1.20 ಎಕ್ರೆ ಜಾಗದಲ್ಲಿ ಹಾಗೂ ನನ್ನ ಹೆಸರಿನಲ್ಲಿರುವ ಜಂಟಿ ಜಾಗದ ಉತ್ಪತ್ತಿಯನ್ನು ನಾನೇ ಪಡೆದಿದ್ದೇನೆ ಎಂದರೆ ಸುಳ್ಳು. ನನ್ನ ತಮ್ಮ ಪ್ರಕಾಶನಿಗೂ ಅರ್ಜಿದಾರರಿಗೂ ಮೊದಲಿನಿಂದಲೂ ಮಾತುಕತೆ ಇರಲಿಲ್ಲ ಆ ಕಾರಣದಿಂದ ಆಗಾಗ ನಮ್ಮಲ್ಲಿ ಜಗಳವಾಗುತ್ತಿತ್ತು ಎಂದರೆ ಸುಳ್ಳು. ನನಗೆ ಯಾವುದೇ ಕೋಣಹಾದು ಅಥವಾ ಹುಲ್ಲು ರಾಶಿಯಿಂದಂ ಬಿದ್ದು ಯಾವುದೇ ಗಾಯವನ್ನು ಮಾಡಿಕೊಂಡಿಲ್ಲ ಕುಡಿದು ಗಾಡಿಯಿಂದ ಬಿದ್ದು ಗಾಯ ಮಾಡಿಕೊಂಡಿದ್ದಿರ ಎಂದು ಅರ್ಜಿದಾರರು ಅನುಭವ ಕೊಡುತ್ತಾರೆ ಎಂದರೆ ಸುಳ್ಳು . ಅರ್ಜಿದಾರರು 2021 ರಲ್ಲಿ ಮನೆಯನ್ನು ಬಿಟ್ಟು ಬಂದ ನಂತರ ಅವರನ್ನು ಮನೆಗೆ ಬರುವಂತೆ ಯಾವತ್ತು ಸಹ ನಾನು ಕರೆದಿಲ್ಲ ಎಂದರೆ ಸುಳ್ಳು ಪಂಚಾಯಿತಿ ಆಗಿರುತ್ತದೆ. ಎಲ್ಲಿ ಪಂಚಾಯಿತಿ ಆಗಿದೆ ಎಂದರೆ ನ್ಯಾಯಾಲಯದಲ್ಲಿ ಮಾಡಿಸಿರುತ್ತಾರೆ.

RW-1

14. ರೌಡಿಗಳನ್ನು ಕರೆದುಕೊಂಡು ಬಂದು ಅರ್ಜಿದಾರರಿಗೆ ಬೆದರಿಕೆ ಹಾಕಿಸಿದ್ದೇನೆ ಎಂದರೆ ಸುಳ್ಳು. ಆ ಬಗ್ಗೆ ಅರ್ಜಿದಾರರು ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದೂರನ್ನು ಸಹ ದಾಖಲು ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅರ್ಜಿದಾರರಿಗೆ ನಾನು ಜೀವನಾಂಶ ಕೊಡಲು ಬಾಧ್ಯಸ್ತ ಎಂದರೆ ಸಾಕ್ಷಿ ನನ್ನ ಹತ್ತಿರ ಇರುವುದನ್ನು ಕೊಡುತ್ತೇನೆ ಕೆಲಸ ಮಾಡಲು ಆಗುವುದಿಲ್ಲ . ಅರ್ಜಿದಾರರಿಗೆ ಔಷಧಿ ಬಟ್ಟೆ ಬರೆ, ಇತರೆ ಖರ್ಚು ತಿಂಗಳಿಗೆ ರೂ. 5000/- ಬರುತ್ತದೆಎಂದರೆ ನನಗೆ ಗೊತ್ತಿಲ್ಲ. ನನ್ನ ಆರೋಗ್ಯ ಬಹಳ ಚೆನ್ನಾಗಿದ್ದು, ಈಗಲೂ ದಿನಕ್ಕೆ ರೂ. 750 ಗಳನ್ನು ಸಂಪಾದನೆ ಮಾಡುತ್ತೇನೆ ಎಂದರೆ ಸುಳ್ಳು. ಕೃಷಿಯಿಂದ ಬರುವ ಎಲ್ಲಾ ಅದಾಯಗಳನ್ನು ಈಗಾಲೂ ಸಹ ನಾನು ಉಪಯೋಗಿಸುತ್ತಿದ್ದೇನೆ ಎಂದರೆ ಸುಳ್ಳು .ಅರ್ಜಿದಾರರಿಗೆ ಜೀವನಾಂಶ ಕೊಡಬೇಕಾಗುತ್ತದೆ ಎಂದಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)